ದಿನಾಂಕ 31-08-2023 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ಶ್ರೀ. ಪಿ.ಕೆ.ಎಸ್ ವಕೀಲರಿಂದಃ

5. ನನ್ನ ಪ್ರಕಾರ ಪ್ರತಿವಾದಿಯರು ನನ್ನ ಶೆಡ್‌ನ್ನು ನೆಲಸಮ ಮಾಡಿದ್ದಾರೆ. ಆ ರೀತಿ ನೆಲಸಮವನ್ನು ದಿಃ 12.9.2018 ರ ಪೂರ್ವದಲ್ಲಿ ಮಾಡಿದ್ದೀರಾ ಎಂದರೆ ಅದು ನನಗೆ ಗೊತ್ತಿಲ್ಲ. ದಿಃ 12.9.2018 ರ ನಂತರ ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿದ್ದ ಶೆಡ್ ನ್ನು ನೆಲಸಮ ಮಾಡಿದ್ದಾರೆ. ಸಹಾಯಕ ಆಯುಕ್ತಕರು ಅಪೀಲು ಸಂಃ 121/2018-2019 ರಲ್ಲಿ ಮಾಡಿದ ಆದೇಶದ ವಿರುದ್ಧ ಅಪೀಲು ಮಾಡಿದ್ದೀರಾ ಎಂದರೆ ಹೌದು. ಸದರಿ ಆದೇಶದ ಪ್ರತಿಯನ್ನು ಸಾಕ್ಷಿಗೆ ತೋರಿಸಿ ಅದೆಯೇ ಎಂದು ಕೇಳಲಾಗಿ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಡಿ.ಸಿ ರವರ ಮುಂದೆ ಯಾವ ಆದೇಶ ಮತ್ತು ಯಾವಾಗಲಿನ ವಿರುದ್ಧ ಅಪೀಲು ಮಾಡಿದ್ದೀರಿ ಎಂದರೆ ಸಾಕ್ಷಿ ನನಗೆ ಅಷ್ಟು ಜ್ಞಾನ ಶಕ್ತಿ ಇರುವುದಿಲ್ಲ ಎಂದು ಹೇಳುತ್ತಾರೆ. ಡಿ.ಸಿ ರವರ ನ್ಯಾಯಾಲಯದಲ್ಲಿ ಯಾವ ಆದೇಶದ ವಿರುದ್ಧ ಅಪೀಲು ಮಾಡಿದ್ದೀರಿ ಎಂದು ನಿಮಗೆ ನೆನಪಿಗೆ ಬರುವುದಿಲ್ಲವಾ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ. ಮುಂದುವರಿದು ನೆನಪಿದೆ ಎಂದು ಹೇಳುತ್ತಾರೆ. ಆ ಅಪೀಲಿನಲ್ಲಿ ಏನು ಆದೇಶ ಆಗಿದೆ ಎಂದು ನನಗೆ ಗೊತ್ತಿಲ್ಲ. ಆದರೆ ಎ.ಸಿ ನ್ಯಾಯಾಲಯದಲ್ಲಿ ಮಾಡಿರುವುದು ಗೊತ್ತು. ಎ.ಸಿ ರವರು ಏನು ಆದೇಶ ಮಾಡಿದ್ದಾರೆ ಎಂದು ನೀವು ಅಪೀಲು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಎ.ಸಿ ರವರು ಆದೇಶ ಮಾಡಿದರೂ ಸಹ ಪ್ರತಿವಾದಿಯರು ನಮ್ಮ ಮೇಲೆ ಕೇಸು ಹಾಕಿದ್ದರು ಆದ ಕಾರಣ ನಾನು ಡಿ.ಸಿ ನ್ಯಾಯಾಲಯದಲ್ಲಿ ಅಪೀಲು ಹಾಕಿದ್ದೇನೆ ಎಂದು ಹೇಳುತ್ತಾರೆ.

6. ಎ.ಸಿ ಯವರು ತನ್ನ ಆದೇಶದಲ್ಲಿ ನಾನು ದಾವಾ ಆಸ್ಥಿಯ ಸ್ವಾಧೀನತೆಯನ್ನು ಹೊಂದಿರುವುದಿಲ್ಲ ಹಾಗೂ ಸ್ಥಳದಲ್ಲಿ ವಾಸವಿರುವುದಿಲ್ಲ ಎಂದು ಮಂಜೂರಾತಿಯನ್ನು ರದ್ದುಪಡಿಸಿದ್ದರು ಎಂದರೆ ಸಾಕ್ಷಿ ನಾನು 2000 ಇಸವಿಯಿಂದ ಆ ಜಾಗದಲ್ಲಿ ವಾಸವಿದ್ದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಿಂದ ಸಂಬೊಳ್ಯ ಮನೆಗೆ 8 ಕಿ.ಮೀ ದೂರ ಇದೆ. ಅಲ್ಲಿ ನನ್ನ ತಂದೆಯವರು ಇರುತ್ತಾರೆ. ನನ್ನ ತಂದೆಯವರು ಕೊಟ್ಟರೆ ಮಾತ್ರ ಅಲ್ಲಿ ಜಾಗ ಸಿಗುತ್ತದೆ ಎಂದು ಹೇಳುತ್ತಾರೆ

7. ಪುಷ್ಪ ಎಂದರೆ ನನ್ನ ಹೆಂಡತಿ, ಅವರು ನನ್ನ ಜೊತೆ ವಾಸವಿದ್ದಾರೆ. ನಿಪಿ4 ರಂತೆ ನನ್ನ ಹೆಂಡತಿಯನ್ನು ಎಸ್.ಡಿ.ಎಂ ಆಸ್ಪತ್ರೆ, ಉಜಿರೆಯಲ್ಲಿ ಚಿಕಿತ್ಸೆಗಾಗಿ ದಾಖಲು ಮಾಡಿರುತ್ತೇನೆ. ಎಂ.ಎ.ಜಿ.ಸಿ.ಆರ್ ನಂಃ 10/2008-09 ರಲ್ಲಿ ದಿಃ 2.7.2008 ರಂದು ತಹಶೀಲ್ದಾರವರು ನೋಟೀಸ್ ನೀಡಿದ್ದಾರಾ ಎಂದರೆ ನೆನಪಿಲ್ಲ. 2008 ರಲ್ಲಿ ತಹಶೀಲ್ದಾರವರು ದಾವಾ ಆಸ್ತಿಯಲ್ಲಿ ನಾನು ಸ್ವಾಧೀನ

ಇರುವುದಿಲ್ಲ ಹಾಗೂ ಯಾವುದೇ ಕೃತಾವಳಿಗಳನ್ನು ಮಾಡಿರುವುದಿಲ್ಲ ಎಂದು ವರದಿ ಸಲ್ಲಿಸಿರುವ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿ ನಾವು ಅಲ್ಲೆ ಇದ್ದ ಕಾರಣ ವಿಚಾರ ಗೊತ್ತು ಎಂದು ಹೇಳುತ್ತಾರೆ. ತಹಶೀಲ್ದಾರವರ ವರದಿಯಂತೆ ಸಹಾಯ ಕಮಿಷನರ್ ರವರು ದಿಃ 16.7.2016 ರಂದು ದಾವಾ ಆಸ್ತಿಗೆ ಭೇಟಿ ನೀಡಿದ್ದಾರೆ ಎಂದರೆ ಸಾಕ್ಷಿ ಆ ದಿನ ನನ್ನ ಹೆಂಡತಿಗೆ ಹುಷಾರಿಲ್ಲದ ಕಾರಣ ಹಾಗೂ ಮುಂಚೆಯೇ ತಿಳಿಸಿದ ಕಾರಣ ಅಲ್ಲಿ ನಿಲ್ಲಲು ಸಾಧ್ಯ ಆಗಿರುವುದಿಲ್ಲ ಎಂದು ಹೇಳುತ್ತಾರೆ. ಸಹಾಯಕ ಕಮಿಷನರ್ ರವರ ಯಾವ ಪ್ರಕರಣದಲ್ಲಿ ಸ್ಥಳ ತನಿಖೆಗಾಗಿ ಬಂದಿದ್ದರು ಎಂಬ ವಿಚಾರ ಗೊತ್ತಾ ಎಂದರೆ ಹೌದು. ದಾವಾ ಆಸ್ತಿಯ ಸ್ವಾಧೀನದಲ್ಲಿ ನಾನು ಯಾವತ್ತೂ ಇರಲಿಲ್ಲ ಎಂದು ಅನುಭವ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ಸ್ವಾಧೀನದಲ್ಲಿ ನಾನು ಇದ್ದೇನೆ ಎಂದು ಹೇಳುತ್ತಾರೆ.

8. ಬೆಳ್ತಂಗಡಿಯ ಆರ್.ಐ ಕಚೇರಿಯಲ್ಲಿ ಗುಮಾಸ್ತರಾಗಿರುವ ವಿಶ್ವನಾಥ್ ನಾಯಕ ರವರ ಪರಿಚಯ ಇರುವುದಿಲ್ಲ. ಕಡತವನ್ನು ತಯಾರು ಮಾಡುವ ಸಮಯದಲ್ಲಿ ಗ್ರಾಮ ಕರಣಿಕರಾದ ಹುಕ್ರಪ್ಪ ರವರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಹುಕ್ರಪ್ಪರವರಿಗೆ ಸಹಾಯಕರಾಗಿ ವಿಶ್ವನಾಥ್ ನಾಯಕ್ ರವರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಆ ಸಮಯಕ್ಕೆ ಹಕ್ಕು ಪತ್ರ ಸಿಗುವಾಗ ಗೊತ್ತಾಗಿರುತ್ತದೆ, ಯಾವ ಅಧಿಕಾರಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲದೆ ಇದ್ದರೂ ಹುಕ್ರಪ್ಪ ಮತ್ತು ವಿಶ್ವನಾಥ್ ರವರ ಸಹಾಯದಿಂದ ಪ್ರತಿವಾದಿಯರು ಸ್ವಾಧೀನದಲ್ಲಿದ್ದ ಜಮೀನನ್ನು ನನ್ನ ಹೆಸರಿಗೆ ಅನಧಿಕೃತವಾಗಿ ಮಾಡಿಸಿಕೊಂಡಿದ್ದೇನೆ ಎಂದರೆ ಸಾಕ್ಷಿ ಪ್ರತಿವಾದಿಯರಿಗೆ ಬೇರೆ ಯಾಗಿರುತ್ತದೆ, ನನಗೂ ಸಹ ಬೇರೆ ಮಂಜೂರಾಗಿರುತ್ತದೆ. ಆದರೆ ಇಬ್ಬರಿಗೂ ಒಟ್ಟಿಗೆ ಮಂಜೂರಿಗುತ್ತದೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುರಿದು ಪ್ರತಿವಾದಿಯರಿಗೆ 51 ಸೆಂಟ್ಸ್ ನನಗೆ 45 ಸೆಂಟ್ಸ್ ಮಂಜೂರಾಗಿದೆ ಎಂದು ಹೇಳುತ್ತಾರೆ. ಆ ರೀತಿ ಮಂಜೂರಾದ ಸ್ಥಳದಲ್ಲಿ ಸ್ವಾಧೀನ ಇರುವುದಿಲ್ಲ ಎಂದು 2007-2008 ರಲ್ಲಿ ಮಂಜೂರಾತಿಯನ್ನು ರದ್ದು ಪಡಿಸುತ್ತೇವೆ ಎಂದು ತಹಶೀಲ್ದಾರವರು ಅದೇ ಕಾರಣದಿಂದ ನೋಟೀಸ್ ನೀಡಿದ್ದಾರೆ ಎಂದರೆ ಸಾಕ್ಷಿ ನನ್ನ ಪರವಾಗಿ ಊರ್ಜಿತವಾಗಿದೆ ಎಂದು ತಹಶೀಲ್ದಾರವರು ಹೇಳಿದ್ದಾರೆ ಎಂದು ಹೇಳುತ್ತಾರೆ. ದಾವಾ ಸ್ವತ್ತಿನ ಸ್ವಾಧೀನವನ್ನು ನಾನು ಹೊಂದಿರುವುದಿಲ್ಲ ಎಂದು ಪ್ರತಿವಾದಿ ಇದೇ ನ್ಯಾಯಾಲಯದಲ್ಲಿ ಮೂಲ ದಾವಾ ಸಂಃ 177/2017 ರಂತೆ ದಾವೆ ಸಲ್ಲಿಸಿ ತಾತ್ಕಾಲಿಕ ತಡೆಯಾಜ್ಞೆ ಆದೇಶವನ್ನು ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ವಕೀಲರನ್ನು ನೇಮಕ ಮಾಡಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಆ ಸಮಯದಲ್ಲಿ ಹಾಕಿರಬಹುದು ಈಗ ನೆನಪಿಲ್ಲ ಎಂದು ಹೇಳುತ್ತಾರೆ.

9. ಮೂಲ ದಾವಾ ಸಂಃ 177/2017 ರಲ್ಲಿ ತಾತ್ಕಾಲಿಕ ತಡೆಯಾಜ್ಞೆ ಆದೇಶಯಾಗಿರುವುದನ್ನು ಮರೆಮಾಚಿ ಬಂಟ್ವಾಳ ರಜೆ ನ್ಯಾಯಾಲಯದಲ್ಲಿ ತಾತ್ಕಾಲಿಕ ತಡೆಯಾಜ್ಞೆ ಆದೇಶವನ್ನು ಪಡೆದುಕೊಂಡು ದಾವಾ ಸ್ವತ್ತಿಗೆ ಅಕ್ರಮ ಪ್ರವೇಶ ಮಾಡಿ ತಾತ್ಕಾಲಿಕ ಕಟ್ಟಡವನ್ನು ನಿರ್ಮಾಣ ಮಾಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಅಕ್ರಮವಾಗಿ ಪ್ರವೇಶ ಮಾಡಿ ನಿರ್ಮಾಣ ಮಾಡಿರುವ ತಾತ್ಕಾಲಿಕ ಶೆಡ್ ನ್ನು ತೆರವುಗೊಳಿಸಬೇಕೆಂದು ಅರ್ಜಿಯನ್ನು ಸಹ ಸಲ್ಲಿಸಿದ್ದೇನೆ ಎಂದರೆ ನನಗೆ ನೆನಪಿಲ್ಲ. ತಾತ್ಕಾಲಿಕ ಶೆಡ್ ನ್ನು ನಿರ್ಮಾಣ ಮಾಡಿ ಕಾನೂನು ಬಾಹಿರವಾಗಿ ವಿದ್ಯುಚ್ಛಕ್ತಿ ಸಂಪರ್ಕವನ್ನು ಪಡೆದುಕೊಂಡಿದ್ದೀರಾ ಎಂದರೆ ಇಲ್ಲ ನಮ್ಮ ಜಾಗಕ್ಕೆ ಪಡೆದುಕೊಂಡಿದ್ದೇವೆ. ನ್ಯಾಯಾಲಯದ ಆದೇಶವನ್ನು ಗ್ರಾಮ ಪಂಚಾಯಿತಿಗೆ ನೀಡಿದ್ದರೂ ಸಹ ಅವರೊಂದಿಗೆ ಶಾಮೀಲಾಗಿ ಮನೆ ನಂಬರನ್ನು ಸಹ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ನನ್ನ ಮನೆಗೆ ನಾನು ಪಡೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ಅಕ್ರಮವಾಗಿ ಪ್ರವೇಶ ಮಾಡಿ ತಾತ್ಕಾಲಿಕ ಶೆಡ್ ನ್ನು ನಿರ್ಮಾಣ ಮಾಡಿ ವಿದ್ಯುಚ್ಛಕ್ತಿ ಸಂಪರ್ಕವನ್ನು ಮತ್ತು ಮನೆ ನಂಬರನ್ನು ದಿಃ 12.9.2018 ರ ನಂತರ ಕಾನೂನು ಬಾಹಿರವಾಗಿ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ನನ್ನ ಹಕ್ಕು ಪತ್ರವನ್ನು ನಾನು ತೋರಿಸಿ ಪಡೆದುಕೊಂಡಿದ್ದೇನೆ ಎಂದು ಹೇಳುತ್ತಾರೆ ಈಗಲೂ ಸಹ ಸಹಾಯಕ ಆಯುಕ್ತರು ನನ್ನ ಮಂಜೂರಾತಿಯನ್ನು ರದ್ದು ಪಡಿಸಿರುವ ವಿಚಾರ ಗೊತ್ತಿಲ್ಲ.

10. ಸಾಕ್ಷಿಗೆ ಸಹಾಯಕ ಕಮಿಷನರ್ ರವರ ಆದೇಶ ತೋರಿಸಿ ಓದುವಂತೆ ಕೇಳಲಾಗಿ ನಾನು ಓದುವುದಿಲ್ಲ ಎಂದು ಹೇಳುತ್ತಾರೆ. ಮುಂದುವರಿದು ಪಹಣಿ ಪತ್ರಿಕೆಗಳು ನಮ್ಮ ಹೆಸರಿನಲ್ಲಿದೆ ಎಂದು ಹೇಳುತ್ತಾರೆ. ಪಹಣಿ ಪತ್ರಿಕೆ ರದ್ದತಿಗಾಗಿ ತಹಶೀಲ್ದಾರವರು ಆದೇಶ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸ್ವಾದೀನತೆಯಲ್ಲಿ ನಾನು ಇದ್ದುದ್ದೆ ಇಲ್ಲ, ಈಗ ದಾವಾ ಸ್ವತ್ತಿನ ಸ್ವಾದೀನವನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ ಎಂದರೆ ಸಾಕ್ಷಿ ನನ್ನ 45 ಸೆಂಟ್ಸ್ ಜಾಗದಲ್ಲಿ ಈಗಲೂ ಸಹ ನಾನೇ ಸ್ವಾದೀನದಲ್ಲಿದ್ದೇನೆ ಎಂದು ಹೇಳುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಬೆಳ್ತಂಗಡಿ